ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
ಸಿ.ಸಿ.ನಂ.**1492/2016..**

ದಿನಾಂಕಃ**25-02-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ರಾಮಚಂದ್ರನಾಯ್ಕ | ಚಾಸಾ -14<br>ಪ್ರಾಸಾ -6. |
| ತಂದೆಯ ಹೆಸರು | ಗೋಪಾಲನಾಯ್ಕ | |
| ವಯಸ್ಸು (ವರ್ಷಗಳಲ್ಲಿ) | 46 | |
| ಉದ್ಯೋಗ | ಪಿಐ, ತರೀಕೆರೆ ಪೊಲೀಸ್ ಠಾಣೆ | |
| ವಾಸ | ತರೀಕೆರೆ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿಃ30.05.2014 ರಿಂದ 06.08.2016 ರ ವರೆಗೂ ಕಡೂರು ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ30.12.2015 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ನಾನು ಪೊಲೀಸ್ ಠಾಣಾ ಪ್ರಭಾರದಲ್ಲಿ ಇದ್ದಾಗ ಚಾಸಾ 1 ರವರು ಹಾಜರುಪಡಿಸಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂ.309/2015 ರಂತೆ ಪ್ರಕರಣ ದಾಖಲಿಸಿರುತ್ತೇನೆ ಹಾಗೂ ಪ್ರ.ವ.ವರದಿಯನ್ನು ಮೇಲಾಧಿಕಾರಿಯವರಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ಮತ್ತು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೂರಿನಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು ಹಾಗೂ ಸದರಿ ಪ್ರ.ವ.ವರದಿಯನ್ನು ನಿಪಿ 8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಕೃತ್ಯ ಸ್ಥಳಕ್ಕೆ ಹೋಗಿ ಚಾಸಾ 1 ರವರು ತೋರಿಸಿದ ಜಾಗದಲ್ಲಿ ಪಂಚರಾದ ಚಾಸಾ 2, 3 ರವರ ಸಮಕ್ಷಮ ಸಂಜೆ 4.30 ರಿಂದ 5.45 ಗಂಟೆಯವರೆಗೂ ಸ್ಥಳ ಪಂಚನಾಮೆ ಮಾಡಿರುತ್ತೇನೆ, ಸ್ಥಳದಲ್ಲಿ ಕಚ್ಚಾ ನಕಾಶೆ ಬರೆದು, ಪೋಟೋ ತೆಗೆದಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ಗುರುತಿಸಿರುವ ನಿಪಿ 2, 3 ಪೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ

ಗುರುತಿಸಿದರು.

ನಂತರ, ಆರೋಪಿಗಳ ಪತ್ತೆಗೆಂದು ಸಿಬ್ಬಂದಿಗಳನ್ನು ನೇಮಿಸಿರುತ್ತೇನೆ. ದಿಃ31.12.2015 ರಂದು ಸಿಬ್ಬಂದಿಗಳು ಆರೋಪಿತರನ್ನು ಬೆಳಗ್ಗೆ 6 ಗಂಟೆಗೆ ಈ ಕೇಸಿಗೆ ಸಂಬಂಧಪಟ್ಟ 5 ಜನ ಆರೋಪಿತರು, 2 ಎಲ್.ಇ.ಡಿ ಟಿ ವಿ, 2 ಬೈಕ್-ಗಳನ್ನು ತಂದು ನನ್ನ ಮುಂದು ಹಾಜರುಪಡಿಸಿರುತ್ತಾರೆ. ಆಗ ನಾನು ಆರೋಪಿತರ ಸ್ವ-ಇಚ್ಛಾ ಹೇಳಿಕೆ ಪಡೆದು ಅವರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ.

ನಂತರ, ಪಂಚರಾದ ಚಾಸಾ 4, 5 ರವರ ಸಮಕ್ಷಮ ಈ ಕೇಸಿನಲ್ಲಿ ನನ್ನ ಮುಂದೆ ಹಾಜರುಪಡಿಸಿದ್ದ ಸ್ವತ್ತುಗಳಾದ 2 ಎಲ್.ಇ.ಡಿ ಟಿ ವಿ, 2 ಬೈಕ್ ಗಳನ್ನು ಬೆಳಗ್ಗೆ 6.15 ರಿಂದ 7 ಗಂಟೆಯವರೆಗೂ ಮಹಜರ್ ಮಾಡಿ ಪೋಟೋ ತೆಗೆದು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ 6ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 6ಸಿ ಎಂದು ಗುರುತಿಸಲಾಯಿತು. ನಂತರ, ಅಮಾನತ್ತು ಪಡಿಸಿಕೊಂಡ ಸ್ವತ್ತುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದು ಮಾಡಿ ಸ್ವತ್ತು ಪಟ್ಟಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ನಂತರ, ಆರೋಪಿತರು ಕೃತ್ಯವೆಸಗಿದ ಸ್ಥಳ ತೋರಿಸಿದ ಮೇರೆಗೆ ಪಂಚರಾದ ಚಾಸಾ 4, 5 ರವರ ಸಮಕ್ಷಮ ಬೆಳಗ್ಗೆ 8 ರಿಂದ 8.45ರ ವರೆಗೂ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಯು ನಿಪಿ 7ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 7ಸಿ ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 1 ರವರ ಮರು ಹೇಳಿಕೆ ಪಡೆದಿರುತ್ತೇನೆ. ಸಿಬ್ಬಂದಿಗಳಾದ ಚಾಸಾ 6 ರಿಂದ 13 ರವರ ಹೇಳಿಕೆ ಪಡೆದಿರುತ್ತೇನೆ.

ಆರೋಪಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸಿಬ್ಬಂದಿಗಳ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ21.01.2016ರಂದು ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಕೆಎ 18 ವಿ 2284ರ ಬೈಕ್ ಅನ್ನು ಅದರ ಮಾಲೀಕರಾದ ಮಂಜುನಾಥ ರವರಿಗೆ ನ್ಯಾಯಾಲಯದ ಆದೇಶದಂತೆ ಬಿಡುಗಡೆ ಮಾಡಿರುತ್ತೇನೆ ಹಾಗೂ ಅವರ ಹೇಳಿಕೆ ಪಡೆದಿರುತ್ತೇನೆ.

ನಂತರ, ಚಾಸಾ1 ರವರಿಗೆ ಎಲ್.ಇ.ಡಿ.ಟಿವಿ-ಗಳನ್ನು ನ್ಯಾಯಾಲಯದ

ಆದೇಶದಂತೆ ಬಿಡುಗಡೆ ಮಾಡಿ ಪೋಟೋ ತೆಗೆದಿರುತ್ತೇನೆ. ಸಾಕ್ಷಿಯು ನಿಪಿ5 ಪೋಟೋವನ್ನು ನೋಡಿ ಗುರುತಿಸಿದರು.

ದಿಃ21.01.2016 ರಂದು ಲಾಡ್ಜ್‌ಗೆ ಸಂಬಂಧಿಸಿದ ಲೆಡ್ಜರ್ ಅನ್ನು ಚಾಸಾ 1 ರವರಿಂದ ಪಡೆದಿರುತ್ತೇನೆ. ಸದರಿ ಲೆಡ್ಜ ರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು ಗುರುತಿಸಲಾಯಿತು.

ದಿಃ03.02.2016 ರಂದು ಅಮಾನತ್ತು ಪಡಿಸಿಕೊಂಡಿದ್ದ ಬೈಕ್ ಸಂಖ್ಯೆ ಬದಲಾವಣೆಯಾಗಿದ್ದು, ಅದರ ಇಂಜಿನ್ ನಂ.HA10EA13916 ಅನ್ನು ಮಾಲೀಕರಾದ ಅಜಿತ್ ರವರಿಗೆ ನ್ಯಾಯಾಲಯದ ಆದೇಶದಂತೆ ಬಿಡುಗಡೆ ಮಾಡಿರುತ್ತೇನೆ ಹಾಗೂ ಅವರ ಹೇಳಿಕೆ ಪಡೆದಿರುತ್ತೇನೆ.

ದಿಃ26.02.2016 ರಂದು ಅಮಾನತ್ತು ಪಡಿಸಿಕೊಂಡಿದ್ದ ಬೈಕ್‌ಗಳು ಬೀರೂರು ಠಾಣಾ ವ್ಯಾಪ್ತಿಗೆ ಬರುವುದರಿಂದ ನ್ಯಾಯಾಲಯದ ಅನುಮತಿಯನ್ನು ಪಡೆದು ಮಾಲುಪಟ್ಟಿಯನ್ನು ಬೀರೂರು ಠಾಣೆಗೆ ವರ್ಗಾವಣೆ ಮಾಡಿರುತ್ತೇವೆ. ನಂತರ, ಕೇಸಿನ ಮುಂದಿನ ತನಿಖೆಗೆಂದು ಚಾಸಾ 15 ರವರಿಗೆ ಹಸ್ತಾಂತರಿಸಿರುತ್ತೇನೆ.

ಆರೋಪಿತರು ಮತ್ತು ಟಿವಿ ನೋಡಿದಲ್ಲಿ ಗುರುತಿಸುತ್ತೇನೆ. ಈ ದಿನ 1, 3, 4 ನೇ ಆರೋಪಿತರು ಗೈರುಹಾಜರಾಗಿದ್ದು ಸದರಿ ಆರೋಪಿತರ ಗುರುತಿನ ಬಗ್ಗೆ ತಮ್ಮ ತಕರಾರು ಇರುವುದಿಲ್ಲ ಎಂದು ಆರೋಪಿತರ ಪರ ವಕೀಲರು ಅರ್ಜಿ ಸಲ್ಲಿಸಿ ತಿಳಿಸಿರುತ್ತಾರೆ.

<u>ಪಾಟೀಸವಾಲುಃ **3, 4** ನೇ ಆರೋಪಿ ಪರ ಶ್ರೀ. ಜಿ.ಎನ್ ವಿ ವಕೀಲರಿಂದಃ</u>

ಸಾಮಾನ್ಯವಾಗಿ ಯಾವುದೇ ಲಾಡ್ಜ್ ನಲ್ಲಿ ರೂಮ್ ಬುಕ್ ಮಾಡುವಾಗ ಸದರಿ ಲಾಡ್ಜ್‌ನ ಮಾಲೀಕರು ಗ್ರಾಹಕರ ಗುರುತಿನ ಚೀಟಿ ಪಡೆಯುತ್ತಾರೆ ಎಂದರೆ ಸರಿ. ನಾನು ಲಾಡ್ಜ್ ಮಾಲೀಕರಿಂದ ಬಾಡಿಗೆಗೆ ಪಡೆದಿದ್ದ ವ್ಯಕ್ತಿಗಳ ಗುರುತಿನ ಚೀಟಿ ಪಡೆದುಕೊಂಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಾಲೀಕರೇ ಗುರುತಿಸಿನ ಚೀಟಿ ಪಡೆದಿರಲಿಲ್ಲ. ಅದೇ ರೀತಿ ಯಾರು ಯಾವಾಗ ಎಷ್ಟು ಗಂಟೆಗೆ ರೂಮ್ ಪಡೆದಿರುತ್ತಾರೆ ಎಂದು ಅವರ ಹೆಸರು ವಿಳಾಸ ಸಮಯ ನಮೂದು ಮಾಡುತ್ತಾರೆ ಎಂದರೆ ಸರಿ. ಆ ದಿನ

ಯಾರು ರೂಮ್ ಬಾಡಿಗೆಗೆ ಪಡೆದಿದ್ದರು, ಯಾವ ದಿನಾಂಕ ಎಷ್ಟುಗಂಟೆಗೆ ಪಡೆದಿರುತ್ತಾರೆ ಎಂದು ಲಾಡ್ಜ್ ನ ಮಾಲೀಕರಿಂದ ದಾಖಲೆ ಪಡೆದಿಲ್ಲ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನಾನು ಲಾಡ್ಜ್ ನಲ್ಲಿ ಲಭ್ಯವಿದ್ದ ದಾಖಲೆ ಪಡೆದಿರುತ್ತೇನೆ. ಸದರಿ ದಾಖಲೆಯು ಏನು ಎಂದರೆ ಅದು ಲಾಡ್ಜ್ ನ ಲೆಡ್ಜರ್ ಆಗಿರುತ್ತದೆ. ನಾನು ಹೇಳುತ್ತಿರುವ ಲೆಡ್ಜರ್
ನಲ್ಲಿ ದಿ:10.12.2015 ರಂದು ಆರೋಪಿತರು ಲಾಡ್ಜ್ಅನ್ನು ಬುಕ್ ಮಾಡಿದ ಬಗ್ಗೆ ಸದರಿ ಲೆಡ್ಜರ್ ನಲ್ಲಿ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೇರೆಯವರ ಹೆಸರಿನಲ್ಲಿ ರೂಮ್ ಪಡೆದಿರುತ್ತಾರೆ.

ಸದರಿ ಲೆಡ್ಜರ್ ನಲ್ಲಿ ಕ್ರಮ ಸಂ.133 ರಲ್ಲಿ ಹೆಸರು, ಸಮಯ, ದಿನಾಂಕವನ್ನು ತಿದ್ದಿ ಬರೆಯಲಾಗಿದೆ ಎಂದರೆ ಸರಿ. ನಾವು ಹೇಳಿದಂತೆ ರಾದೀಪು ಯಾರು ಆತ ಏಕೆ ರೂಮ್ ಪಡೆದಿದ್ದ ಎಂದು ತನಿಖೆ ಮಾಡಿರುತ್ತೀರಾ ಎಂದರೆ ತನಿಖೆ ಮಾಡಿರುತ್ತೇನೆ, ಆರೋಪಿತರು ರಾದೀಪು ಎಂಬ ಹೆಸರಿನಲ್ಲಿ ಸುಳ್ಳು ನಮೂದು ಮಾಡಿ ರೂಮ್ ಪಡೆದಿರುತ್ತಾರೆ. ಆ ದಿನ ಆರೋಪಿತರು ರೂಮ್ ಅನ್ನು ಬುಕ್ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕಳ್ಳತನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಇಲಾಖೆಯ ಅಂಕಿಅಂಶಕ್ಕಾಗಿ ಆರೋಪಿತರ ವಿರುದ್ಧ ಸುಳ್ಳು ಕೇಸು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಾನು ಮಹಜರ್ ಮಾಡುವ ಮುನ್ನ ಪಂಚರಿಗೆ ನೋಟೀಸು ನೀಡಿಲ್ಲ. ನಾನು ಸ್ಥಳ ಮಹಜರ್ ಮಾಡಿರುತ್ತೇನೆ ಎಂದು ಹೇಳುವ ರವಿಕಿರಣ್ ಲಾಡ್ಜ್‌ನ ನೆಲ ಮಹಡಿಯಲ್ಲಿ ಕಾಫಿ ಟೀ ಜೆರಾಕ್ಸ್ ಅಂಗಡಿ ಇದೆ ಎಂದರೆ ಸರಿ. 1 ನೇ ಮಹಡಿಯಲ್ಲಿ ಕೆಲವು ವಕೀಲರುಗಳ ಕಛೇರಿಗಳು ಇವೆ ಎಂದರೆ ಸರಿ. 2 ನೇ ಮಹಡಿಯಲ್ಲಿ ರೂಮ್ ಬಾಡಿಗೆಗೆ ನೀಡುತ್ತಾರೆ ಎಂದರೆ ಸರಿ. ಸದರಿ ಲಾಡ್ಜ್ ನಲ್ಲಿ ಒಟ್ಟು 10 ರೂಮ್ ಗಳು ಇದ್ದವು.

ನಾನು ನಿಪಿ 1 ಮಹಜರಿನಲ್ಲಿ ರೂಮಿನ ಚೆಕ್ಕುಬಂದಿ ಉತ್ತರಕ್ಕೆ ರೂಮ್ ಸಂ.209, ದಕ್ಷಿಣಕ್ಕೆ 206 ಎಂದು ನಮೂದು ಮಾಡಿರುತ್ತೇನೆ ಹಾಗೂ ನಕಾಶೆಯಲ್ಲಿ ಉತ್ತರಕ್ಕೆ 205, ದಕ್ಷಿಣಕ್ಕೆ 209 ಎಂದು ನಮೂದು ಮಾಡಿದ್ದು ಒಂದಕ್ಕೊಂದು ತಾಳೆ

ಇಲ್ಲ ಎಂದರೆ ಸರಿ, ಸಾಕ್ಷಿಯು ಕಚ್ಚಾ ನಕಾಶೆಯಲ್ಲಿ ನಮೂದು ಇರುವುದು ಸರಿಯಾಗಿ ಇರುತ್ತದೆ, ಆದರೆ ಮಹಜರ್ ನಲ್ಲಿ ಕಣ್ತಪ್ಪಿನಿಂದ ತಪ್ಪಾಗಿ ನಮೂದು ಮಾಡಿರುತ್ತೇನೆ. ಕಣ್ತಪ್ಪಿನಿಂದ ಈ ತಪ್ಪು ಆಗಿರುತ್ತದೆ ಎಂದು ನ್ಯಾಯಾಲಯಕ್ಕೆ ವರದಿ ನೀಡಿರುವುದಿಲ್ಲ. ಒಟ್ಟು ರೂಮ್ ಗಳು 10 ಇದ್ದ ಕಾರಣ ರೂಮ್ ಸಂಖ್ಯೆ 201 ರಿಂದ 210 ಆಗುತ್ತದೆ ಎಂದರೆ ಸರಿ. ನನ್ನ ನಾಕಶೆಯಲ್ಲಿ 201 ರಿಂದ 209 ರೂಮ್ ಗಳನ್ನು ನಮೂದು ಮಾಡಿರುತ್ತೇನೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿಲ್ಲ ಹಾಗೂ ಸ್ಥ,ಳದಲ್ಲಿ ಮಹಜರ್ ಬರೆದಿಲ್ಲ ಠಾಣೆಯಲ್ಲಿ ಮಹಜರ್ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣ ಮಹಜರ್ ಮತ್ತು ನಕಾಶೆಯಲ್ಲಿ ತಪ್ಪುಗಳಾಗಿರುತ್ತದೆ ಎಂದರೆ ಸರಿಯಲ್ಲ.

ಆರೋಪಿತರ ಯಾವುದೇ ಸ್ವ-ಇಚ್ಚಾ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಅಮಾನತ್ತು ಮಹಜರ್ ಮಾಡುವ ಮುನ್ನ ಪಂಚರಿಗೆ ನೋಟೀಸು ನೀಡಿಲ್ಲ. ನಾನು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆ ಪಡೆದಿಲ್ಲವೆಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಠಾಣಾ ಅಂಕಿಸಂಖಿಗೊಸ್ಕರ ಆರೋಪಿತರ ವಿರುದ್ಧ ಕೇಸು ದಾಖಲು ಮಾಡಿದ್ದೇನೆಂದರೆ ಸರಿಯಲ್ಲ.

<u>ಪಾಟೀಸವಾಲುಃ</u> 1 ನೇ ಆರೋಪಿ ಪರ ವಕೀಲರು ತಮ್ಮ ಪರವಾಗಿನ ಪಾಟೀ ಸವಾಲನ್ನಾಗಿ ಈ ಮೇಲಿನ ಪಾಟೀ ಸವಾಲನ್ನು ಅನುಮೋದಿಸುವಂತೆ ಕೋರಿರುತ್ತಾರೆ, ಮನವಿಯನ್ನು ಪುರಸ್ಕರಿಸಲಾಗಿರುತ್ತದೆ.

<u>ಮರು ವಿಚಾರಣೆ ಃ ಇಲ್ಲ</u>
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು